ತಾರೀಖು 14ನೆ ಮೇ 1907.

ನಂ. 10667—ಸ್ಯಾನಿ. 21-06—132, ಫನವನ್ನೈದಿದ ಮೈಸೂರು ರೆಸಿಡೆಂಟರವರ ಮೊದಲನೆ ಅಸಿಸ್ಟೆಂಟರ 1907ನೆ ಇಸವಿಯ ಮೇ 8ನೇ ತಾರೀಖು 536ನೆ ನಂಬರಿನ ಇಂಡಾರ್ಸಮೆಂಟನೊಡನೆ ಬಂದು ತಲಪಿದ ಇದರಡಿ ಕಂಡ ಮದರಾಸು ಸರ್ಕಾರದ—ಇಸ್ತಿಹಾರ್ನಾಮೆಯನ್ನು ಸರ್ವ ಜನರ ತಿಳುವಳಿಕೆಯ ಬಗ್ಗೆ ಪುನಹ ಪ್ರಕಟಿಸಿದೆ :—

ಬರುವ ಆನಿ ತಿರುಮಂಜನಂ ಉತ್ಸವ ಕಾಲದಲ್ಲಿ ದಕ್ಷಿಣ ಆರ್ಕಾಟು ಡಿಸ್ಟ್ರಿಕ್ಟಿನ ಚಿದಂಬರಂ ತಾಲ್ಲೂಕಿನಲ್ಲಿರುವ ಚಿದಂಬರಕ್ಕೆ ಬಳ್ಳಾರಿ ನುತ್ತು ಸೇಲಂ ಡಿಸ್ಟ್ರಿಕ್ಟುಗಳಿಂದಲೂ ಮೈಸೂರು ಸಂಸ್ಥಾನದಿಂದಲೂ ಮತ್ತು ಪ್ಲೇಗು ತಗುಲಿರುವುದಾಗಿ ಪ್ರಸಿದ್ಧಪಡಿಸಿರುವ ಇತರ ಭಾಗಗಳಿಂದಲೂ ಬರುವ ಜನರನ್ನು ಬಿಟ್ಟರೆ ಆ ಸ್ಥಳದಲ್ಲಿ ಪ್ಲೇಗು ಉಂಟಾಗುವ ಅಪಾಯವಿರುವುದಾಗಿ ಸಭಾ ಸಮೇತರಾದ ಗವರ್ನರನರು ತೃಪ್ತಿಪಟ್ಟಿರುವ ಕಾರಣ.

ಸಾಂಕ್ರಾಮಿಕ ಜಾಡ್ಯಗಳ ಸಂಬಂಧವಾದ 1897ನೆ ಇಸವಿಯ ಆಕ್ಟಿನ ಪ್ರಕಾರ ಕೊಡಲ್ಪಟ್ಟ ಅಧಿಕಾರಗಳನ್ನು ನಡೆಸುವುದರಲ್ಲಿ ಸಭಾ ಸಮೇತರಾದ ಗವರ್ನರವರು, ಸದರಿ ಉತ್ಸವಕ್ಕೆ ಸದರಿ ಭಾಗಗಳಿಂದ 1907ನೆ ಇಸವಿಯ ಜೂನ್ 3ನೆ ತಾರೀಖಿನಿಂದ 19ನೆ ತಾರೀಖಿನ ವರೆಗೆ (ಎರಡು ದಿನಗಳೂ ಸೇರಿ) ಜನರು ಬರಕೂಡದೆಂದು ನಿಷೇಧಿಸಿರುವುದಲ್ಲದೆ, ಮೇಲ್ಕಂಡ ತಾರೀಖುಗಳ ಮಧ್ಯೆ ರೈಲು ಮೂಲಕ ಪ್ರಯಾಣ ಮಾಡುವುದಕ್ಕೆ ಯಾವ ಟಕೆಟ್ಟುಗಳನ್ನೂ ಮೇಲ್ಕಂಡ ಉತ್ಸವಕ್ಕೆ ಹೋಗಬೇಕೆಂದಿರುವ ಅಥವಾ ಹೋಗಬೇಕೆಂದಿರುವುದಾಗಿ ನಂಬಲ್ಪಡುವ ಯಾವ ಮನುಷ್ಯನಿಗೂ, ಮದರಾಸು ರೈಲು ಮಾರ್ಗದಲ್ಲಿರುವ ಗುಡುಪಲ್ಲಿ, ಕುಪ್ಪಂ, ಮೂಲನೂರು, ಮತ್ತು ಪಚ್ಚೂರು ಸ್ಟೇಷನ್ನುಗಳಲ್ಲಿಯೂ, ಸದರ್ನ ಮಹಾರಾಷ್ಟ್ರ ರೈಲು ಮಾರ್ಗದಲ್ಲಿರುವ ಬಳ್ಳಾರಿ, ಕೊಟ್ಟೂರು, ಅಂಬಲಿ, ಮಲಪಿ, ಹಗರಿಬೊಮ್ಮನಹಳ್ಳಿ; ಹಂಪಾಪಟ್ಟಣಂ, ಮರಿಯಮ್ಮನಹಳ್ಳಿ ಮತ್ತು ಹೊಸಪೇಟೆ ಸ್ಟೇಷನ್ನುಗಳಲ್ಲಿಯೂ ಸಾತ್ ಇಂಡಿಯನ್ ರೈಲು ಮಾರ್ಗದಲ್ಲಿರುವ ತೆಲಪ್ಪಕ್ಕಂ, ಪುದುಚೆತ್ತಿರಂ, ಪೋಟೋ ನೋವೋ ಕಿಲ್ಲೈ, ಚಿದಂಬರಂ ಕೊಲರೂ (ಕೊಲ್ಲಡ) ಮತ್ತು ಕೀಯಾಳಿ ಸ್ಟೇಷನ್ನುಗಳಿಗೆ, ವಿಕ್ರಯಿಸಕೂಡದೆಂದು ಸಹ ವಿಧಿಸಿರುತ್ತಾರೆ.

ಈ ಇಸ್ತಿಹಾರ್ನಾಮೆಗೆ ವಿರೋಧವಾಗಿ ಮೇಲ್ಕಂಡ ಉತ್ಸವಕ್ಕೆ ಹೋಗುವ ಎಲ್ಲಾ ಮನುಷ್ಯರೂ ಹಿಂದಕ್ಕೆ ಕಳುಹಿಸಲ್ಪಡುವರು.

ತಾರೀಖು 14ನೆ ಮೇ 1907.

ನಂ. 10668—ಸ್ಯಾ. 194-06—2, ಫನವನ್ನೈದಿದ ಮೈಸೂರು ಸೀಮೆಯ ರೆಸಿಡೆಂಟರವರಿಂದ ಕೊಡಲ್ಪಟ್ಟ 1907ನೆ ಇಸವಿಯ ಏಪ್ರಿಲ್ 27ನೆ ತಾರೀಖಿನ ಪಿ. 497ನೆ ನಂಬರಿನ ಇದರಡಿ ಕಂಡ ಇಸ್ತಿಹಾರ್ನಾಮೆಯನ್ನು, ಸಮಸ್ತರ ತಿಳುವಳಿಕೆಯ ಬಗ್ಗೆ ಪುನಃ ಪ್ರಕಟಿಸಿ ಇದೆ :—

1907ನೆ ಇಸವಿಯ ಏಪ್ರಿಲ್ 27ನೆ ತಾರೀಖಿನ ಪಿ. 497ನೆ ನಂಬರಿ, ಮೊಕ್ಕಾಂ ಬೆಂಗಳೂರು.

ಬ್ರಿಟಿಷ್ ಸರ್ಕಾರದವರಿಗೆ ಅಧಿಕಾರವನ್ನು ಕೊಟ್ಟಿರುವ ಮೈಸೂರು ಸೀಮೆಯ ರೈಲ್ವೆ ಜವಿನಾನುಗಳಿಗೆ ಲಗಾವಾಗುವ 1897ನೆ ಇಸವಿಯ ಸಾಂಕ್ರಾಮಿಕ ಜಾಡ್ಯಗಳ ಆಕ್ಟಿನ 2ನೆ ಪ್ರಕರಣದ (1)ನೆ ಒಳಪ್ರಕರಣದಿಂದ ಕೊಡಲ್ಪಟ್ಟ ಅಧಿಕಾರಗಳನ್ನು ಚಲಾಯಿಸುವುದರಲ್ಲಿ, ಮತ್ತು 1898ನೆ ಇಸವಿಯ ಡಿಸೆಂಬರ್ 2ನೆ ತಾರೀಖಿನ 6457ನೆ ನಂಬರ್ ಇಸ್ತಿಹಾರ್ನಾಮೆಯ ರದ್ದು ಮಾಡಿ, ರೆಸಿಡೆಂಟರವರು ಬೆಂಗಳೂರು ಸಿಟಿ ರೈಲ್ವೆ ಸ್ಟೇಷನಿನಲ್ಲಿ ಪ್ಲೇಗ್ ಕೆಲಸದ ಮೇಲೆ ಇರುವ ಆಸ್ಪತ್ರೆ ಅಸಿಸ್ಟೆಂಟಿಗೆ ಈ ಕೆಳಗೆ ನಮೂದಿಸುವ ಅಧಿಕಾರಗಳನ್ನು ಕೊಡಲು ಹುಕುಂ ದಯಪಾಲಿಸಿರುತ್ತಾರೆ,—ಯಾವುವೆಂದರೆ :—

(i) ಬೆಂಗಳೂರು ಸಿಟಿ ರೈಲ್ವೆ ಸ್ಟೇಷನಿನ ಸರಹದ್ದುಗಳೊಳಗೆ ಇರುವ ಎಲ್ಲಾ ಮನೆಗಳನ್ನೂ ಕಟ್ಟಡಗಳನ್ನೂ ಪ್ರವೇಶಿಸುವುದಕ್ಕೂ ಪರೀಕ್ಷೆ ಮಾಡುವುದಕ್ಕೂ ಅಧಿಕಾರ ;

(ii) ಅವುಗಳ ನಿವಾಸಿಗಳನ್ನೆಲ್ಲಾ ಪರೀಕ್ಷೆ ಮಾಡುವುದಕ್ಕೆ ಅಧಿಕಾರ ;

(iii) ಪ್ಲೇಗಿನಿಂದ ಪೀಡಿತರಾಗಿರುವಂತೆ ತನಗೆ ಕಂಡುಬಂದ ಅಥವಾ ಪೀಡಿತರಾಗಿರುವಂತೆ ತಾನು ನಂಬಬಹುದಾದ, ಅಥವಾ ಪ್ಲೇಗಿನಿಂದ ಪೀಡಿತರಾಗಿರುವಂತೆ ಕಂಡುಬಂದ ಅಥವಾ ನಂಬಲ್ಪಟ್ಟ ಅಂಥಾ ಜನರೊಡನೆ ಸಂಪರ್ಕವುಳ್ಳ, ಎಲ್ಲಾ ನಿವಾಸಿಗಳನ್ನೂ, ಆ ಉದ್ದೇಶಕ್ಕಾಗಿ ಏರ್ಪಡಿಸಲ್ಪಟ್ಟ ಪ್ಲೇಗ್ ಅಥವಾ ಕಾಂಟ್ಯಾಕ್ಟ್ ಯಾ ಸಂಪರ್ಕದ ಕ್ಯಾಂಪಿಗೆ ಸಂದರ್ಭಾನುಸಾರವಾಗಿ ಕಳುಹಿಸುವ ಅಧಿಕಾರ ;

(iv) ಪ್ಲೇಗ್ ರೋಗ ಉಂಟಾಗಿರುವ ಅಥವಾ ಸಂದೇಹಾಸ್ಪದವಾದ ಜ್ವರ ಸಂಭವಿಸಿರುವ ಅಥವಾ ಸೋಂಕು ತಗುಲಿರುವುದೆಂದು ನಂಬುವುದಕ್ಕೆ ತನಗೆ ಕಾರಣವುಳ್ಳ, ಬೆಂಗಳೂರು ಸಿಟಿ ರೈಲ್ವೆ ಸ್ಟೇಷನಿನ ಸರಹದ್ದುಗಳೊಳಗೆ ಇರುವ ಎಲ್ಲಾ ಮನೆಗಳನ್ನೂ ಕಟ್ಟಡಗಳನ್ನೂ ಡಿಸಿನ್‌ಫೆಕ್ಟ್ ಯಾ ಸೋಂಕು ಹೋಗಲಾಡಿಸುವುದಕ್ಕೆ ಅಧಿಕಾರ ;

(v) ಈ ಹಿಂದಿನ ವಾಕ್ಯದಲ್ಲಿ ಸೂಚಿಸಿದ ಮನೆಗಳಲ್ಲಿಯೂ ಕಟ್ಟಡಗಳಲ್ಲಿಯೂ ಸಿಕ್ಕಿದ ಎಲ್ಲಾ ಖಾಸಿಗೆ ಚರಸ್ವತ್ತುಗಳಿಂದಲೂ ಸೋಂಕು ಹೋಗಲಾಡಿಸುವುದಕ್ಕೆ ಅಧಿಕಾರ.

2. ಗೋಷಾಸ್ತ್ರೀ ಇರತಕ್ಕ ಮನೆಯನ್ನೂ, ಅವಳು ಒಳಗೆ ಹೋಗುವುದಕ್ಕೆ ಸಾಕಾದಷ್ಟು ಕಾಲವನ್ನು ಕೊಡದೆ, ಪ್ರವೇಶಿಸುವುದಕ್ಕಾಗಲಿ ಅಂಥಾ ಯಾವ ಸ್ತ್ರೀಯನ್ನಾಗಲಿ ಅವಳ ಸಂಬಂಧಿಗಳ ಅಥವಾ ಮನೆಯ ಇತರ ನಿವಾಸಿಗಳ ಅನುಮತಿ ಕೇಳಿಯೆ ಪರೀಕ್ಷೆ ಮಾಡುವುದಕ್ಕಾಗಲಿ ಸದರಿ ಅಸ್ಪತ್ರೆ ಅಸಿಸ್ಟೆಂಟಿಗೆ ಅಧಿಕಾರ ಕೊಡುವಂತೆ ಈ ಹಿಂದಿನ ರೆಗ್ಯುಲೇಷನಿನಲ್ಲಿ ಇರುವುದು ಯಾವುದೂ ತಿಳಿಯಲ್ಪಡತಕ್ಕದ್ದಲ್ಲ.

3. ಈ ಮುಂಜೆ ಹೇಳಿದ ಅಸ್ಪತ್ರೆ ಅಸಿಸ್ಟೆಂಟಿ ಮಾಡುವಂತೆ ಈ ಇಸ್ತಿಹಾರ್ನಾಮೆಯು ಹೇರಿಗೆ ಅಧಿಕಾರ ಕೊಡಲ್ಪಟ್ಟ ಯಾವ ಏರ್ಪಾಡನ್ನಾಗಲಿ ಅಡ್ಡಿ ಮಾಡುವ ಯಾವ ಮನುಷ್ಯನಾಗಲಿ ಇಂಡಿಯನ್ ಪೆನಲ್ ಕೋಡಿನ 188ನೆ ಪ್ರಕರಣದ ಮೇರೆಗೆ ಶಿಕ್ಷಿಸಲ್ಪಡಬಹುದಾದ ಬಂದು ತಪ್ಪಿತವನ್ನು ಮಾಡಿದೆಂತೆ ಭಾವಿಸಲ್ಪಡತಕ್ಕದ್ದು, ಮತ್ತು ತಪ್ಪು ಸಾಬೀತಾದ ನಂತರ ಆರು ತಿಂಗಳ ವರೆಗೆ ಹೋಗಬಹುದಾದ ಬಂದು ಅವಧಿಯ ಪರ್ಯಂತ ಯಾವುದಾದರೂ ತರಹದ ಖೈದಿಗಾಗಲಿ ಅಥವಾ ಒಂಬೈ ನೂರು ರೂಪಾಯಿ ವರೆಗೆ ಹೋಗಬಹುದಾದ ಜುರ್ಮಾನೆಗಾಗಲಿ ಅಥವಾ ಎರಡಕ್ಕೂ ಆಗಲಿ ಗುರಿಯಾಗತಕ್ಕದ್ದು.